ವೈನಿ ನಿಮ್ ಮದ್ವೇಲಿ ಗಂಡಿನ ಕಡೆಯವರಿಗೆ ಹಿಂಗೆಲ್ಲಾ ಹಿಂಸೆ ಮಾಡಿದ್ರಂತಲ್ಲ ಖರೆನಾ?' ಎಂದಷ್ಟೇ ಕೇಳಿದೆ. ಶುರುವಾಯಿತು ಮಾರಿ ಹಬ್ಬದ ತಯಾರಿ. ಕುಟ್ರಿ ಹೆಂಡತಿ ಜಯಶ್ರೀ ಗಂಡನ ಕುರಿಯಂತೆ ಕೆಡವಿ, ಲೀಲಾಜಾಲವಾಗಿ ಮಾತಿನಲ್ಲೇ ಅವನ ಸುಲಿದು ಹಾಕಿದರು. 'ಲೇ ಬದ್ಮಾಶ್ ಆತ್ಮೀಯ ಅಂತ ರಹಸ್ಯ ಹೇಳ್ಕೊಂಡ್ರೆ ಎಲ್ಲಾ ಒದರಿ ಹೊಡೆದಾಟ ಹಚ್ಚಿಟ್ಟೆಯಲ್ಲೋ. ಇನ್ನು ಒಂದ್ವಾರ ನಂಗೆ ಹಾಸಿಗೆ ಪಥ್ಯ ಖಾಯಮ್ಮಾತು ಬಿಡು' ಎಂದು ಕೊಸರಾಡಿಕೊಂಡನು.

ಮಾವನ ಮನೆಯವರನ್ನ, ಅಲ್ಲಿನ ಪರಿಸರವನ್ನ, ಅವರು ಮಾಡುವ ಸಣ್ಣಪುಟ್ಟ ಎಡವಟ್ಟುಗಳನ್ನ, ಹೆಂಡತಿಯ ತಮ್ಮ, ತಂಗಿ, ಅವರ ಕಡೆಯ ನೆಂಟರಿಷ್ಟರನ್ನ ಹೀಗೆ ಆಗಾಗ ಪ್ರೀತಿಯಿಂದ ಜಿವುಟುತ್ತಿರಬೇಕು. ಆಗ ಹುಸಿ ಜಗಳ ಮನೆಯಲ್ಲಿ ತಂಗಾಳಿಯಂತೆ ಬೀಸುತ್ತಿರುತ್ತದೆ. ಇಂಥ ಸರಳ ಸುಖವನ್ನು ಯಾರೂ ಕಳೆದುಕೊಳ್ಳಬಾರದು. ಹಾಗಂತ ಮಿತಿಯನ್ನೂ ದಾಟಿ ಹೋಗಿ ಬಿರುಗಾಳಿಯೂ ಆಗಬಾರದು. ಹಾಸ್ಯಪ್ರಜ್ಞೆ ಇದ್ದರಷ್ಟೇ ಇದು ಜೀರ್ಣವಾಗಬಲ್ಲ ವಿಚಾರ.

ಮದುವೆ ಹೊಸತರಲ್ಲಿ ಕೆಲವರಂತೆ ನಾನೂ ಸುಖಾಸುಮ್ಮನೆ ಹೆಣ್ಣು ಕೊಟ್ಟ ಮಾವನನ್ನು ಜರಿದಿರುವುದುಂಟು. ಸಣ್ಣಪುಟ್ಟ ಮಾತಿಗೆಲ್ಲಾ ಮುನಿಸಿಕೊಂಡಿರುವುದುಂಟು. ಆ ಸಿಟ್ಟನ್ನು ಇವಳ ಮೇಲೆ ತೋರಿಸಲು ಹೋಗಿ ಸೋತು ಗೆದ್ದಿರುವುದೂ ಉಂಟು. ಒರಟು ಯೌವ್ವನದ ಹಮ್ಮಿಕೆ, ತಿಳಿವಳಿಕೆಯ ಕೊರತೆ, ಹುಡುಗಾಟಿಕೆಯ ಬುದ್ಧಿ ಇದನ್ನೆಲ್ಲಾ ಮಾಡಿಸಿತು ಎಂದು ನಾನೀಗ ಸುಲಭ ಸಮಜಾಯಿಷಿ ಕೊಡಬಹುದು. ಆದರೆ ಅವರನ್ನು ನಿಧಾನವಾಗಿ ಅರಿಯುತ್ತಾ ಹೋದಂತೆ ಗೌರವವೂ ಹೆಚ್ಚಾಯಿತು. ಆದರೂ, ನನ್ನ ವ್ಯಂಗ್ಯಬುದ್ಧಿ ಮಾತ್ರ ಅವರಲ್ಲಿನ ಮುಗ್ಧತೆ, ವಿಚಿತ್ರ ಮರೆಗುಳಿತನ, ಅಸಡಾಬಸಡಾ ವರ್ತನೆ, ಇತ್ಯಾದಿಗಳನ್ನೆಲ್ಲಾ ಬಿಡುವಿಲ್ಲದೆ ಗಮನಿಸುತ್ತಿತ್ತು.

ನನ್ನಾಕೆಯ ತಂದೆ ಆ ಊರಿನ ಪ್ರಸಿದ್ಧ ವೈದ್ಯರು. ಜನ ಜಾತ್ರೆಯೇ ಅವರ ಕ್ಲಿನಿಕ್ಕಿನ ಎದುರು ಜಮಾಯಿಸಿರುತ್ತದೆ. ಅತ್ತೆ ಮನೆಯಲ್ಲಿ ಕೂತು ಬೇಸರವಾದಗೆಲ್ಲಾ ನಾನು ಅಲ್ಲಿಗೆ ಹೋಗುತ್ತಿದ್ದೆ. ಮನೆಗೆ ಊಟಕ್ಕೂ ಬಾರದೆ ಹೈರಾಣಾಗಿ ದುಡಿಯುವ ಅವರನ್ನು ಮಾತಾಡಿಸಲು ನನ್ನ ಮಟ್ಟಿಗೆ ಅದೇ ಸೂಕ್ತ ಜಾಗ. ಜೊತೆಗೆ ನಾನಾ ನೋವುಗಳಿಂದ ಬರುವ ಹಳ್ಳಿಯ ಜನರ ಮಾತು, ವರ್ತನೆ, ನೋವು, ನಲಿವು ಬದುಕಿನ ಜೀವಂತಿಕೆಗಳನ್ನು ಗಮನಿಸುವುದು ನನಗಿಷ್ಟದ ಕೆಲಸ. ಜೊತೆಗಲ್ಲಿ ಡಾಕ್ಟ್ರ ಅಳಿಯ ಎಂದು ಜನ ಗುರುತಿಸುವುದರಿಂದ ತಲೆಮೇಲೆ ಒಂದೈದು ಕೊಂಬುಗಳೂ ಮೂಡುತ್ತವೆ. ಮಾವ ಸರ್ಕಾರಿ ವೈದ್ಯರಾಗಿ ನಿವೃತ್ತರಾದರೂ ಅವರ ಖದರು ಕಡಿಮೆಯಾಗಿಲ್ಲ. ಸುತ್ತಲ ಹಳ್ಳಿಯ ಜನ 'ಇವ್ರು ಹತ್ರ ಚೂಜಿ ಚುಚ್ಚಿಸಿಕೊಂಡ್ರೆ ಗುಣಾಗೋದು. ಇವರ ಕೈಗುಣ ಅಂತಾದ್ದು' ಎಂದು ಕೊಂಡಾಡುತ್ತಾರೆ. ಹಳ್ಳಿಯ ಜನ ಒಮ್ಮೆ ನಂಬಿದರೆ ಹೀಗೇನೆ.

ಒಂದು ದಿನ ಮಾವನ ಚಿಕಿತ್ಸಾ ವೈಖರಿ ನೋಡೇ ಬಿಡುವ ಎಂದು ಹೋದೆ. ಜನ ಸಾಲುಗಟ್ಟಿದ್ದರು. ಇಕ್ಕಟ್ಟಾದ ಜಾಗದಲ್ಲೇ ಒಬ್ಬನ ಮಲಗಿಸಿ ಡ್ರಿಪ್ ಹಾಕಿದ್ದರು. ಆ ಡ್ರಿಪ್ಪಿನ ಬಾಟಲ್ಲು ಹಿಡಿದವನೊಬ್ಬ ಬೀಡಿ ಸೇದುತ್ತಾ ಬಂದು ಹೋಗುವವರ ಜೊತೆ ಮಾತಾಡುತ್ತಾ ನಿಂತಿದ್ದ. ಕೆಳಗೆ ಮಲಗಿದೋನು ಅಂತಹ ಕಷ್ಟವ ತೋರಿಸಿಕೊಳ್ಳದೆ ಸಮಾಧಾನಕ್ಕೆ ಎಂಬಂತೆ ಗುಲ್ಕೋಸು ಏರಿಸಿಕೊಂಡು ಮಲಗಿದ್ದ. 'ಆ ಮೊಳೆಗೆ ಬಾಟ್ಲು ಸಿಕ್ಕಾಕಿಸೋದಲ್ವೆ. ಕೈಯಲ್ಲೇ ಏಟೋತ್ತೂಂತ ಹಿಡ್ಕಂಡೀರಿ' ಎಂದು ನಿಂತವನಿಗೆ ಕೇಳಿದೆ. 'ಅಯ್ಯೋ ರಶ್ಶು ಸ್ವಾಮಿ. ರಗಟಾ ತಳ್ಳಾಟ. ಯಾವೂನಾರ ಕಿತ್ತಾಕಿದ್ರೆ ಕಷ್ಟ ಅಲವೂರ' ಎಂದ. ಅವತ್ತು ಸಂತೆ ದಿನವಾದ ಕಾರಣ ಕಾಯಿಲೆ ತೋರಿಸಲು ಬಂದವರಷ್ಟೇ ಅವರ ಸಂಗಡ ಕಂಪನಿ ಕೊಡುವ ಜನರೂ ಬಂದು ಟೆಂಟು ಜಡಿದಿದ್ದರು. ಸಿಟಿಯ ಕ್ಲಿನಿಕ್ಕುಗಳ ಅನಗತ್ಯ ಗತ್ತು, ನರ್ಸ್‌ಗಳ ವತಾರ, ಹೆಸರು ಬರೆಸುವ